ನಾನು ಡಿವಿಜನಲ್ ಕಂಟ್ರೋಲರ್ ಗುಲ್ಬರ್ಗಾ ಡಿವಿಜನ್‌ನವರಿಗೆ ಮತ್ತು ಮಾನ್ಯ ಸಾರಿಗೆ ಸಚಿವರಿಗೆ ದಿನಾಂಕ 8-9-1990ರಂದು ಪತ್ರ ಮುಖಾಂತರ ತಿಳಿಸಿದ್ದೇನೆ. ಯಾವ ಕ್ರಮವೂ ಇಲ್ಲ. ಇದರ ಬಗ್ಗೆ ಮಾನ್ಯ ಸಚಿವರು ತಿಳಿಸಬೇಕೆಂದು ಕೋರುತ್ತೇನೆ.

ಶ್ರೀ ಅಜೀಜ್ ಸೇಠ್ : ಈ ಗುಲ್ಬರ್ಗಾ ಡಿವಿಜನ್ ಬಗ್ಗೆ ಅನೇಕ ಮಾನ್ಯ ಸದಸ್ಯರಿಗೆ ಗೊತ್ತಿದೆ. ಗುಲ್ಬರ್ಗಾ ಡಿವಿಜನ್‌ನಲ್ಲಿ ರಾಯಚೂರು, ಬೀದರ್ ಇತ್ಯಾದಿ ಕಡೆಗಳಲ್ಲಿ ಹಿಂದೆ ಹೆವಿ ರೇನ್ ಆಗಿ ರಸ್ತೆ ಎಲ್ಲಾ ಹಾಳಾಗಿದ್ದು, ಸರಿಯಾದ ರಸ್ತೆ ಇಲ್ಲ. ತಾವು ಸಹ ಈ ವಿವರ ನೋಡಬಹುದು. ನಮ್ಮ ಬಸ್‌ಗಳಲ್ಲಿ ಬ್ರೇಕ್ ಡೌನ್ ಆಗಿರುವುದು, ಟೈರ್ ಪಂಕ್ಚರ್ ಆಗಿರುವುದು, ಸ್ಪ್ರಿಂಗ್‌ಗಳು ಕಟ್ ಆಗಿರುವುದು ಇತ್ಯಾದಿಯಾಗಿ ನಾನು ತೊಂದರೆಗಳಾಗಿವೆ. ಹೀಗಾಗಿ ಬಸ್‌ಗಳು ಸರಿಯಾಗಿ ಆಗಿಲ್ಲ. ಮಾನ್ಯ ಸದಸ್ಯರು ಈಗ ಡಿಪೋದಿಂದ ಬಸ್ ಬರುವುದು ತಡವಾಗುತ್ತದೆ ಎಂದು ಹೇಳಿದ್ದಾರೆ. ಇದನ್ನು ಈಗತಾನೇ ನನ್ನ ಗಮನಕ್ಕೆ ತಂದಿದ್ದಾರೆ. ಡಿಪೋದಿಂದ ಬಸ್‌ಗಳು ಬರುವುದು ಏನಾದರೂ ತಡವಾದರೆ ಶೀಘ್ರದಲ್ಲಿಯೇ ಅದನ್ನು ಸರಿಪಡಿಸುತ್ತೇನೆ ಎಂದು ಹೇಳುತ್ತಿದ್ದೇನೆ. ಮತ್ತೆ ಕೊನೆಯ 'ಡಿ' ಉತ್ತರದಲ್ಲಿ ಈ ರೀತಿ ಇದೆ. 'Does the Government take action.' I want to make a correction. KSRTC will be directed to operate the buses according to timings as per time schedule.

ಶ್ರೀ ಬಸವಂತ ರೆಡ್ಡಿ ಮೋತಕಪಲ್ಲಿ : ಮಾನ್ಯ ಅಧ್ಯಕ್ಷರೇ, ನಾನು ಇನ್ನೊಂದು ಪ್ರಶ್ನೆ ಕೇಳಿದ್ದೆ. 2-3 ದಿವಸಗಳು ಬಸ್ಸನ್ನು ಬಂದ್ ಮಾಡಿದರ ಬಗ್ಗೆ ಕೇಳಿದರೆ ಆದಾಯ ಇಲ್ಲವೆಂದು ಹೇಳುತ್ತಾರೆ. ನಾನು ಸ್ವತಃ ಆ ಭಾಗದಲ್ಲಿ ಪ್ರಯಾಣ ಮಾಡುವಾಗ ಬಸ್‌ನ ಒಳಗೆ ಹಾಗೂ ಮೇಲೆ ಪ್ರಯಾಣಿಕರು ಕುಳಿತಿರುವುದನ್ನು ನೋಡಿದ್ದೇನೆ. ಆ ಬಸ್ ನಂಬರ್ ಮತ್ತು ವೇಳೆಯನ್ನು ಸಹ ನಮೂದಿಸಿ ಮಾಹಿತಿ ಕೊಟ್ಟಿರುವ ಬಗ್ಗೆ ಇಲಾಖೆ ಕೈಗೊಂಡಿರುವ ಕ್ರಮ ಏನು ಮತ್ತು ಆ ಬಸ್‌ಗಳಿಂದ ಬಂದ ಆದಾಯ ಏನು ಎಂದು ಕೇಳಿದ್ದೆ. ಆದರೆ ಇದುವರೆಗೆ ಈ ಬಗ್ಗೆ ಯಾವ ಉತ್ತರವೂ ಇಲ್ಲ.

ಶ್ರೀ ಅಜೀಜ್ ಸೇಠ್ : ಅದನ್ನು ವಿಚಾರಿಸಿ ಮಾನ್ಯ ಸದಸ್ಯರ ಗಮನಕ್ಕೆ ತರುತ್ತೇನೆ.

ಬಾಡಿಗೆ ಕಟ್ಟಡದಲ್ಲಿರುವ ವಿಶ್ವವಿದ್ಯಾನಿಲಯಗಳ ಸಂಖ್ಯೆ

509 - ಶ್ರೀ— ಸಾದತ್ ಅಲಿ ಖಾನ್ (ಚನ್ನಪಟ್ಟಣ) : ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. *ರಾಜ್ಯದಲ್ಲಿರುವ ವಿಶ್ವವಿದ್ಯಾ ನಿಲಯಗಳಲ್ಲಿ ಎಷ್ಟು ವಿಶ್ವವಿದ್ಯಾನಿಲಯಗಳು ಬಾಡಿಗೆ ಮತ್ತು ಸರ್ಕಾರದ ಸ್ವಂತ ಕಟ್ಟಡಗಳಲ್ಲಿವೆ? ಅವುಗಳಲ್ಲಿ ಯಾವ ವಿಶ್ವವಿದ್ಯಾನಿಲಯ ಸರ್ಕಾರದ ಕಟ್ಟಡ ಹೊಂದಿದೆ, ಮತ್ತು ಯಾವ ವಿಶ್ವವಿದ್ಯಾನಿಲಯ ಬಾಡಿಗೆ ಕಟ್ಟಡದಲ್ಲಿದೆ (ವಿವರ ನೀಡುವುದು)?*
2. *ಸರ್ಕಾರಿ ಪಾಲಿಟೆಕ್ನಿಕ್ ಚನ್ನಪಟ್ಟಣ ಇಲ್ಲಿ ಕಂಪ್ಯೂಟರ್ ಸೈನ್ಸ್ ಅಂಡ್ ಇಂಜಿನಿಯರಿಂಗ್ ಕೋರ್ಸ್‌ನ್ನು ಪ್ರಾರಂಭಿಸುವ ಪ್ರಸ್ತಾವನೆ ಇದೆಯೇ?*
3. *ಹಾಗಿದ್ದರೆ ಇದನ್ನು ಯಾವಾಗ ಪ್ರಾರಂಭಿಸಲಾಗುವುದು?*

ಶ್ರೀ ಎಂ. ವೀರಪ್ಪಮೊಯಿಲಿ (ಶಿಕ್ಷಣ ಮಂತ್ರಿಗಳು) :

1. ಎಲ್ಲಾ ವಿಶ್ವವಿದ್ಯಾನಿಲಯಗಳು ತಮ್ಮದೇ ಆದ ಸ್ವಂತ ಕಟ್ಟಡ ಹೊಂದಿದೆ. ಆದರೆ ಕುವೆಂಪು ವಿಶ್ವವಿದ್ಯಾನಿಲಯದ ಪರೀಕ್ಷಾ ವಿಭಾಗವು ಮಾತ್ರ ಬಾಡಿಗೆ ಕಟ್ಟಡದಲ್ಲಿದೆ.

2. ಸರ್ಕಾರಿ ಪಾಲಿಟೆಕ್ನಿಕ್ ಚೆನ್ನಪಟ್ಟಣ ಇಲ್ಲಿ ಕಂಪ್ಯೂಟರ್ ಸೈನ್ಸ್ ಕೋರ್ಸ್‌ನ್ನು ಪ್ರಾರಂಭಿಸುವ ಪ್ರಸ್ತಾವನೆ ಇಲ್ಲ.

3. ಉದ್ಭವಿಸುವುದಿಲ್ಲ.

ಶ್ರೀ ಸಾದತ್ ಅಲಿ ಖಾನ್ : ಮಾನ್ಯ ಸಭಾಧ್ಯಕ್ಷರೇ, ಈಗ ಉತ್ತರದಲ್ಲಿ ಎಲ್ಲಾ ಯೂನಿವರ್ಸಿಟಿಗಳು ತಮ್ಮದೇ ಆದ ಸ್ವಂತ ಕಟ್ಟಡವನ್ನು ಹೊಂದಿದೆ, ಕುವೆಂಪು ವಿಶ್ವವಿದ್ಯಾನಿಲಯದ ಪರೀಕ್ಷಾ ವಿಭಾಗ ಮಾತ್ರ ಬಾಡಿಗೆ ಕಟ್ಟಡದಲ್ಲಿದೆ ಎಂದು ಹೇಳಿದ್ದಾರೆ. ಈ ಉತ್ತರ ಸರಿಯಾಗಿದೆ. ಚೆನ್ನಪಟ್ಟಣದಲ್ಲಿ ನಾವು ಕಂಪ್ಯೂಟರ್ ಕೋರ್ಸ್ ಸ್ಟಾರ್ಟ್ ಮಾಡಿ ಎಂದು 8-10 ರೆಪ್ರೆಸೆಂಟೇಷನ್ಸ್ ಕೊಟ್ಟಿದ್ದೇವೆ. ಆದರೆ ಮಂತ್ರಿಗಳು ಕಂಪ್ಯೂಟರ್ ಸೈನ್ಸ್ ಕೋರ್ಸ್‌ನ್ನು ಪ್ರಾರಂಭಿಸುವ ಬಗ್ಗೆ ಯಾವುದೇ ಪ್ರೊಪೋಸಲ್ ಬಂದಿಲ್ಲ ಎಂದು ಉತ್ತರ ಕೊಟ್ಟಿದ್ದಾರೆ. ಈಗ ಚೆನ್ನಪಟ್ಟಣದಲ್ಲಿ ಡಿಪ್ಲೊಮಾ ಇನ್ ಸಿವಿಲ್ ಇಂಜಿನಿಯರಿಂಗ್, ಡಿಪ್ಲೊಮಾ ಇನ್ ಮೆಕಾನಿಕಲ್ ಇಂಜಿನಿಯರಿಂಗ್ ಮತ್ತು ಡಿಪ್ಲೊಮಾ ಇನ್ ಆಟೊಮೊಬೈಲ್ ಇಂಜಿನಿಯರಿಂಗ್ ಮಾಡಿರುವಂತಹ ಬೇಕಾದಷ್ಟು ಜನ ಅನ್-ಎಂಪ್ಲಾಯ್ಡ್ ಆಗಿದ್ದಾರೆ. ಅದಕ್ಕೆ ಕಂಪ್ಯೂಟರ್ ಕೋರ್ಸ್ ಸ್ಟಾರ್ಟ್ ಮಾಡಬೇಕು. ಸ್ಟೇಟ್‌ನಲ್ಲಿ ಕಂಪ್ಯೂಟರ್ಸ್ ಡಿಮ್ಯಾಂಡ್ ಇದೆ. ಆದುದರಿಂದ ಚೆನ್ನಪಟ್ಟಣದಲ್ಲಿ ಬರುವ ವರ್ಷವಾದರೂ ಕಂಪ್ಯೂಟರ್ ಕೋರ್ಸ್‌ನ್ನು ಸ್ಟಾರ್ಟ್ ಮಾಡುತ್ತೀರಾ ಎಂದು ಮಾನ್ಯ ಸಚಿವರನ್ನು ಕೇಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಅಧ್ಯಕ್ಷರೇ, ಈಗ ತಮಗೆ ಗೊತ್ತಿದ್ದ ಪ್ರಕಾರ ರಾಜ್ಯ ಸರ್ಕಾರ ವಿಶ್ವಬ್ಯಾಂಕ್ ಯೋಜನೆಯಡಿಯಲ್ಲಿ ತಾಂತ್ರಿಕ ಸಂಸ್ಥೆಗಳ ಮುಖ್ಯವಾಗಿ ಪಾಲಿಟೆಕ್ನಿಕ್‌ಗಳ ಸಮಗ್ರ ಅಭಿವೃದ್ಧಿ ಯೋಜನೆಯನ್ನು ಮಂಜೂರು ಮಾಡಿದೆ.

ಇದು 100 ಕೋಟಿ ರೂಪಾಯಿಗಳ ಯೋಜನೆ ಆಗಬೇಕು ಎಂದು ನಾವು ಪ್ರಸ್ತಾವನೆಯನ್ನು ಕೊಟ್ಟಿದ್ದೆವು. ಆದರೆ ಆದರಲ್ಲಿ 50 ಕೋಟಿ ರೂಪಾಯಿಗಳನ್ನು ಕಡಿಮೆ ಮಾಡಿ, 50 ಕೋಟಿ ರೂಪಾಯಿಗಳಿಗೆ ಮಾತ್ರ ಸೀಮಿತ ಮಾಡಿ ವಿಶ್ವ ಬ್ಯಾಂಕ್ ಮಂಜೂರಾತಿ ಮಾಡಿದೆ. ವಿಶ್ವ ಬ್ಯಾಂಕ್ ಯೋಜನೆ ಮುಖಾಂತರ ಹೊಸ ಡಿಪ್ಲೊಮಾ ಕೋರ್ಸ್‌ಗಳನ್ನು ಪ್ರಾರಂಭಿಸುವ ಯೋಜನೆಯನ್ನು ನಾವು ಹಾಕಿಕೊಂಡಿದ್ದೆವು. ಇದರಿಂದ ಏನು ಆಯಿತು ಅಂದರೆ, ಕೆಲವು ಪಾಲಿಟೆಕ್ನಿಕ್‌ಗಳಲ್ಲಿ ಈ ಹೊಸ ಯೋಜನೆಗಳನ್ನು ಹಾಕಲಿಕ್ಕೆ ಈ 50 ಕೋಟಿ ರೂಪಾಯಿಗಳನ್ನು ಕಡಿಮೆ ಮಾಡಿದ್ದರಿಂದ ನಮಗೆ ಅಡಚಣೆ ಬಂತು. ನಮ್ಮ ಇಲಾಖೆಯವರು ಕಳಿಸಿದ ವರದಿಯಲ್ಲಿ ವಿಶ್ವ ಬ್ಯಾಂಕ್ ಈ ರೀತಿ ಕಡಿತ ಮಾಡಿದ ಕಾರಣ ನಾವು ಕೆಲವು ಪಾಲಿಟೆಕ್ನಿಕ್‌ಗಳಲ್ಲಿ ಈ ಹೊಸ ಕೋರ್ಸ್‌ಗಳನ್ನು ಪ್ರಾರಂಭ ಮಾಡಲಿಕ್ಕೆ ಅಡಚಣೆ ಆಗಿದೆ. ಆದರ ಕೂಡ ತಾವು ವಿಶೇಷವಾಗಿ ಇದರ ಬಗ್ಗೆ ವಿನಂತಿ ಮಾಡಿದ್ದೀರಿ. ಆದನ್ನು ಎಷ್ಟು ಸಾಧ್ಯ ಆಗುತ್ತದೋ ಅಷ್ಟು ಈ ವಿಚಾರವನ್ನು ಮರು ಪರಿಶೀಲನೆ ಮಾಡಿ ಈ ಕಂಪ್ಯೂಟರ್ ಕೋರ್ಸನ್ನು ಚೆನ್ನಪಟ್ಟಣದ ಪಾಲಿಟೆಕ್ನಿಕ್‌ನಲ್ಲಿ ಮಾಡುವುದಕ್ಕೆ ಎಲ್ಲಾ ಪ್ರಯತ್ನ ಮಾಡುತ್ತೇವೆ.

ಶ್ರೀ ಡಿ.ಬಿ. ಚಂದ್ರೇಗೌಡ : ರಾಜ್ಯದ ಎಲ್ಲಾ ವಿಶ್ವ ವಿದ್ಯಾಲಯಗಳೂ ತಮ್ಮ ಸ್ವಂತ ಕಟ್ಟಡದಲ್ಲಿ ಕೆಲಸ ಮಾಡುತ್ತಿವೆ. ಆದರೆ ರಾಷ್ಟ್ರಕವಿ ಕುವೆಂಪು ಅವರ ಹೆಸರಿನಲ್ಲಿರುವುದು ಮಾತ್ರ ಬಾಡಿಗೆಯ ಕಟ್ಟಡದಲ್ಲಿ ನಡೆಯುತ್ತಿದೆಯೆಂದು ಉತ್ತರದಲ್ಲಿದೆ. ನನಗೂ ಗೊತ್ತು ಅದು ಹೊಸ ವಿಶ್ವವಿದ್ಯಾಲಯ. ಆದ್ದರಿಂದ ಈ ಸಾರಿ ಈ ವಿಶ್ವವಿದ್ಯಾನಿಲಯಕ್ಕೆ ವಿಶೇಷ ಆಸಕ್ತಿ ಕೊಟ್ಟು, ಹೆಸರಿಗೆ ಗೌರವ ಬರುವ ಹಾಗೆ, ಹೆಚ್ಚು ಹಣ ಕೊಟ್ಟು ಕಟ್ಟಡ ಕಟ್ಟಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಎಂ. ವೀರಪ್ಪ ಮೊಯಿಲಿ : ಸನ್ಮಾನ್ಯ ರಾಷ್ಟ್ರಕವಿ ಕುವೆಂಪು ವಿಶ್ವವಿದ್ಯಾನಿಲಯ ಏನಿದೆ ಅದರ ಪರೀಕ್ಷಾ ವಿಭಾಗ ಮಾತ್ರ ಬಾಡಿಗೆ ಕಟ್ಟಡದಲ್ಲಿದೆ, ಉಳಿದದ್ದು ಬಾಡಿಗೆ ಕಟ್ಟಡದಲ್ಲಿಲ್ಲ. ನಾನು ಒಪ್ಪುತ್ತೇನೆ. ಕುವೆಂಪು ಅವರು ರಾಷ್ಟ್ರಕವಿಗಳು, ವಿಶ್ವಕವಿಗಳು, ಅದರಲ್ಲೂ ನಮ್ಮ ಜೊತೆಯಲ್ಲಿ ಇರುವಂತಹವರು, ಅಂಥವರ ಹೆಸರಿನಲ್ಲಿ ವಿಶ್ವವಿದ್ಯಾನಿಲಯ ಬಹಳ ಉಜ್ವಲವಾಗಿ ಬೆಳೆಯಬೇಕೆಂಬ ಉದ್ದೇಶದಿಂದ ಪ್ರಾರಂಭ ಮಾಡಿದ್ದು. ಆದರೆ ಪ್ರಾರಂಭಿಕ ವರ್ಷಗಳಲ್ಲಿ ಕಟ್ಟಡದ ಕೆಲಸ ಇರಬಹುದು, ಶಿಕ್ಷಣದ ವಿಚಾರ ಇರಬಹುದು, ಅಷ್ಟು ಉನ್ನತ ಮಟ್ಟಕ್ಕೆ ಬೆಳೆಯಲಿಕ್ಕೆ ನಾನು ಕಾರಣಗಳಿಂದ ಸಾಧ್ಯವಾಗಲಿಲ್ಲ ಎಂಬುದನ್ನು ನಾನು ಒಪ್ಪುತ್ತೇನೆ. ತಾವು ಹೇಳಿದಂತೆ, ಕಟ್ಟಡಗಳ ಬಗ್ಗೆ ಸರ್ಕಾರ ವಿಶೇಷ ಆಸಕ್ತಿ ತೆಗೆದುಕೊಂಡು, ಬೇರೆ ಬೇರೆ ಕಾರ್ಯಕ್ರಮಗಳ ರೂಪುರೇಷೆ ತಯಾರು ಮಾಡಿ ಬರುವ ವರ್ಷದಿಂದ 1991-92 ರಿಂದ ಜಾರಿಗೆ ತರುತ್ತೇವೆ.

ಮೈಸೂರು ಜಿಲ್ಲೆಯಲ್ಲಿ ಕಪ್ಪುಹಲಗೆ ಯೋಜನೆ

1135 - ಶ್ರೀ ಕೆ. ಹರ್ಷಕುಮಾರ ಗೌಡ (ಚಾಮರಾಜ) : ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ಜಿಲ್ಲೆಯಲ್ಲಿ ಕಪ್ಪುಹಲಗೆ ಯೋಜನೆಯಡಿಯಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳಿಗಾಗಿ 350 ಜನ ಅಭ್ಯರ್ಥಿಗಳಿಗೆ 17-5-89 ರಂದು ಅರ್ಜಿ ಕರೆದು 29-6-90 ರಂದು ಸಂದರ್ಶನ ನಡೆಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಸಂದರ್ಶನದ ಮೂಲಕ ಸುಮಾರು 750 ಜನ ಅಭ್ಯರ್ಥಿಗಳ ಆಯ್ಕೆಯಾಗಿರುವುದು ನಿಜವೇ?

ಇ) ಪ್ರಸಕ್ತ ಹೊಸ ಆಯ್ಕೆ ನೀತಿಯ ಅನುಸಾರದ ಮೇಲೆ ಆಯ್ಕೆಯಾಗಿರುವ ಅಭ್ಯರ್ಥಿಗಳಿಗೆಲ್ಲ ಉದ್ಯೋಗ ದೊರಕುತ್ತಿದೆಯೇ?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು):

ಅ) ಹೌದು.

ಆ) 3500 ಅಭ್ಯರ್ಥಿಗಳ ಸಂದರ್ಶನ ನಡೆಸಲಾಗಿದೆಯೇ ವಿನಹಃ ಅಭ್ಯರ್ಥಿಗಳ ಆಯ್ಕೆ ಮಾಡಿರುವುದಿಲ್ಲ.

ಇ) ಮೇಲೆ ತಿಳಿಸಿದ ನೇಮಕಾತಿಯಲ್ಲಿ ಅಭ್ಯರ್ಥಿಗಳನ್ನು ಆಯ್ಕೆ ಮಾಡದೇ ಇರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಕೆ. ಹರ್ಷಕುಮಾರ ಗೌಡ : ಸಚಿವರು ಉತ್ತರದಲ್ಲಿ ಮೈಸೂರು ಜಿಲ್ಲೆಯಲ್ಲಿ 1989ರಲ್ಲಿ ಶಿಕ್ಷಕರ ಹುದ್ದೆಗಾಗಿ ಒಂದು ಸಂದರ್ಶನ ನಡೆಯಿತು ಆಗ 3500 ಅಭ್ಯರ್ಥಿಗಳನ್ನು ಕರೆದು 750 ಅಭ್ಯರ್ಥಿಗಳ ಆಯ್ಕೆ ಮಾಡಿಲ್ಲವೆಂದು ಹೇಳಿದ್ದಾರೆ. ನನಗೆ ಆಲ್ಲಿನ ಯುವಕರು ಬಂದು ನಾವೆಲ್ಲಾ ಆಯ್ಕೆಯಾಗಿದ್ದೇವೆ, ನಮ್ಮನ್ನು ಕಡೆಗಣಿಸಿದ್ದಾರೆ. ಈಗ ಸಂದರ್ಶನಕ್ಕೆ ೧೧ ಸಾವಿರ ಅಭ್ಯರ್ಥಿಗಳನ್ನು ಕರೆದಿದ್ದಾರೆ. ನಮ್ಮ ಭವಿಷ್ಯವೆಲ್ಲ ಹಾಳಾಗುವ ಸ್ಥಿತಿಯಲ್ಲಿದೆ ಎಂದು ಹೇಳಿದ್ದಾರೆ. ಅಂದರೆ ಆಯ್ಕೆಯಾಗಬಹುದಾದ 750 ಜನರ ಭವಿಷ್ಯ ಏನಾಗಬೇಕು? ಕರ್ನಾಟಕದಲ್ಲಿ 29 ವರ್ಷ ವಯಸ್ಸನ್ನು ಇದಕ್ಕೆ ನಿಗದಿಮಾಡಿದ್ದೀರಿ, ಅಂಥವರಿಗೆಲ್ಲ ಆಯ್ಕೆ ಮಾಡಿ ಹುದ್ದೆ ಕೊಡುತ್ತೀರಾ? ಆಮೇಲೆ, ಹೆಣ್ಣುಮಕ್ಕಳಿಗೆ 29 ವರ್ಷ ವಯಸ್ಸನ್ನು ಯಾವ ಆಧಾರದ